ಇ) ಹೋಟೆಲ್ ಮಯೂರ ಕಾವೇರಿ, ಕೆ.ಆರ್.ಎಸ್.

ಈ) ಶ್ರೀರಂಗಪಟ್ಟಣದ ಗುಂಬಜ್ ಬಳಿ ಸುಲಭ ಶೌಚಾಲಯ

ಉ) ಪ್ರವಾಸಿ ವಸತಿ ಗೃಹ, ಮೇಲುಕೋಟೆ.

ಊ) ಕಾವೇರಿ ಫಿಷಿಂಗ್ ಕ್ಯಾಂಪ್, ಭೀಮೇಶ್ವರಿ.

ಋ) ಫಿಷಿಂಗ್ ಕ್ಯಾಂಪ್, ದೊಡ್ಡಮಾಕಳಿ.

ಋೂ) ರಸ್ತೆ ಭೂ ಸೌಲಭ್ಯ, ಶಿವನಸಮುದ್ರ ಮತ್ತು ಮದ್ದೂರು.

2. *ಪ್ರಾರಂಭಿಸಬೇಕಾದ ಯೋಜನೆಗಳು*

ಅ) ಪ್ರವಾಸಿ ಸ್ವಾಗತ ಕೇಂದ್ರ, ಮಂಡ್ಯ

ಆ) ಸುಲಭ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ, ಶಿವನ ಸಮುದ್ರ

ಇ) ಯಾತ್ರಿ ನಿವಾಸ್, ಶ್ರೀರಂಗಪಟ್ಟಣ

ಈ) ಶ್ರೀರಂಗಪಟ್ಟಣದ ದರಿಯಾ ದೌಲತ್ ಮತ್ತು ಗುಂಬಜ್ ಸ್ಮಾರಕಗಳಿಗೆ ಧ್ವನಿ ಮತ್ತು ಹೊನಲು ಬೆಳಕು ಯೋಜನೆ.

ಉ) ಸುಲಭ ಶೌಚಾಲಯ, ಶ್ರೀರಂಗಪಟ್ಟಣ

ಊ) ಕೊಕ್ಕರೆ ಬೆಳ್ಳೂರಿನಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣ

ಮೇಲ್ಕಂಡ ಯೋಜನೆಗಳ ಜೊತೆ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸಿ ಸ್ಥಳಗಳ ಬಗ್ಗೆ ಪ್ರವಾಸಿ ಮಾಹಿತಿ ಮಡಿಕೆಯನ್ನು ವಿತರಿಸಲು ಪ್ರವಾಸಿಗರ ಅನುಕೂಲಕ್ಕಾಗಿ ಮಂಡ್ಯದಲ್ಲಿ ಪ್ರವಾಸಿ ಕಛೇರಿಯನ್ನು ತೆರೆಯಲಾಗಿದೆ.

## ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗುವ ರಸ್ತೆ ದುರಸ್ತಿ

3088 - ಶ್ರೀ ಅಂಗಾರ ಎಸ್ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸುಳ್ಯ ತಾ: ಜಾಲ್ಸೂರು ಸುಬ್ರಮಣ್ಯ ರಸ್ತೆ ಸುಬ್ರಹ್ಮಣ್ಯ ಗುಂಡ್ಯ ರಸ್ತೆ ದರ್ಜೆ ಸುಬ್ರಹ್ಮಣ್ಯ ರಸ್ತೆ, ಉಪ್ಪಿನ ಅಂಗಡಿ ಕಡಬ ಸುಬ್ರಹ್ಮಣ್ಯ ರಸ್ತೆಗಳು ಹೆಚ್ಚು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದಲ್ಲಿ ಈ ರಸ್ತೆಗಳು ಹಾಳಾಗಿರುವುದರಿಂದ ಪವಿತ್ರ ದೇವಾಲಯವಾದ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?*

3) *ಈ ರಸ್ತೆಗಳ ದುರಸ್ತಿಗಾಗಿ ಸರ್ಕಾರದ ಎಷ್ಟು ಹಣ ಬಿಡುಗಡೆ ಮಾಡಿದೆ?*

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

1) ಸರ್ಕಾರದ ಗಮನಕ್ಕೆ ಬಂದಿದೆ.

2) ಸದರಿ ರಸ್ತೆಗಳು ಹಾಳಾಗಿರುವುದರಿಂದ ಪವಿತ್ರ ದೇವಾಲಯವಾದ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗಲು ಸಾರ್ವಜನಿಕರಿಗೆ ಆಗುವ ಅನಾನುಕೂಲವನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

*ವಿವರಗಳು ಈ ಕೆಳಕಂಡಂತಿದೆ :*

1. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆ ಕಿಮೀ 7.50 ರಿಂದ 13.00 ವರೆಗೆ ಆಯ್ದ ಭಾಗದಲ್ಲಿ ಡಾಂಬರೀಕರಣ ಮಾಡಲು ರೂ. 15.00 ಲಕ್ಷದ ಮೊತ್ತದ ಕಾಮಗಾರಿಯನ್ನು ಮಳೆಗಾಲದ ನಂತರ ಸದ್ಯದಲ್ಲಿಯೇ ಪ್ರಾರಂಭಿಸಲಾಗುತ್ತದೆ.
2. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಗೆ ಕೆಲವು ಆಯ್ದ ಭಾಗಗಳಲ್ಲಿ ಚರಂಡಿಗಳನ್ನು ದುರಸ್ತಿ ಪಡಿಸಲು ಸಿಆರ್‌ಎಫ್, ಡಿಸಿ, ಗ್ರಾಂಟ್ಸ್ ಅಡಿಯಲ್ಲಿ 3.00 ಲಕ್ಷ ಅನುದಾನ ದೊರೆತಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ಯೋಜನೇತರ ಅನುದಾನದಲ್ಲಿ ಗುಂಡಿ ಮುಚ್ಚುವ ಕೆಲಸ ಕೈಗೊಂಡಿದೆ.

3) ರೂ. 47.754 ಲಕ್ಷ ಅನುದಾನ ಬಿಡುಗಡೆ ಮಾಡಿದೆ.

**ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿರುವ ಅಭ್ಯರ್ಥಿಗಳ ವಿವರಗಳು**

3089 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ? ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿಯಾಗಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? ಪ್ರತ್ಯೇಕವಾಗಿ ವಿವರ ನೀಡುವುದು ?*

*ಆ) ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರದ ಮುಖ್ಯಾಂತರ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳಬೇಕೆಂಬ ಷರತ್ತು ಹಿಂತೆಗೆದುಕೊಂಡಿರುವುದು ನಿಜವೇ ?*

*ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?*

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ.1, ಈ ಕಚೇರಿಯಲ್ಲಿ ನೋಂದಣಿಯಾಗಿರುವ ಅಭ್ಯರ್ಥಿಗಳ ಸಂಖ್ಯೆ. 15,084 (ಆಗಸ್ಟ್ 2000ದ ಅಂತ್ಯಕ್ಕೆ)